## ಮಾತು ಮೆಲುಕು

ಆಗ ನನಗೆ ಸುಮಾರು ಹದಿನಾರು, ಹದಿನೇಳು ವರ್ಷ. 'ನಮ್ಮಪ್ಪನಿಗೆ ಎಷ್ಟೆಲ್ಲ ಪವರ್ ಇದೆ. ಏನು ಬೇಕಾದರೂ ಮಾಡಬಹುದಲ್ಲ, ಯಾಕೆ ಇಷ್ಟು ಸರಳವಾಗಿರುತ್ತಾರೆ?' ಅನಿಸುತ್ತಿತ್ತು. ಆರಾಮವಾಗಿ ಅಧಿಕಾರ ಚಲಾಯಿಸಿಕೊಂಡು, ಎಲ್ಲರಿಗೂ ಆದೇಶ ನೀಡುತ್ತಾ ಇರಬಹುದಾಗಿತ್ತಲ್ಲ. ಯಾಕೆ ಆ ರೀತಿ ಮಾಡುವುದಿಲ್ಲ ಎಂಬ ಸಂಗತಿ ನನ್ನನ್ನು ಯಾವಾಗಲೂ ಕಾಡುತ್ತಿತ್ತು. ಆ ರೀತಿಯ ಅಧಿಕಾರ ಬೇಕಾಗಿಲ್ಲ, ಪ್ರೀತಿಯಿರುವಲ್ಲಿ ಅದು ಅಮುಖ್ಯ ಎನ್ನುವುದು ನಂತರ ತಿಳಿಯುತ್ತಾ ಹೋಯಿತು.

ಅಪ್ಪಾಜಿ ತುಂಬಾ ಸರಳವಾಗಿದ್ದಾಗ, ನಾವು ಮಕ್ಕಳು ಬೇರೆ ರೀತಿ ನಡೆದುಕೊಂಡು ಯಾರಾದರೂ ನಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡಿಕೊಂಡಿದ್ದು ಕಿವಿಗೆ ಬಿದ್ದರೆ ಅವರಿಗೆ ಎಷ್ಟು ನೋವಾಗಬಹುದು? ನಮ್ಮ ಬಗ್ಗೆ ಎಷ್ಟು ಬೇಸರಗೊಳ್ಳಬಹುದು? ಎಂಬ ಭಯ ನಮಗಿತ್ತು. ಅವರ ಮೇಲಿನ ಗೌರವವೇ ನಮ್ಮನ್ನು ನಿಯಂತ್ರಿಸುತ್ತಿತ್ತು.

ರಾಜಕುಮಾರ್ ಅಂದ್ರೆ ಎಲ್ಲರಿಗೂ ಅಗಾಧವಾದ ಗೌರವ ಇತ್ತು. 'ಅವರ ಮನೆಯವರು' ಎಂಬ ಕಾರಣಕ್ಕೆ ನಮ್ಮ ಮೇಲೆಯೂ ಜನರು ತೋರುತ್ತಿದ್ದ ಪ್ರೀತಿ, ವಾತ್ಸಲ್ಯ ಇರುತ್ತದಲ್ಲ, ಅದು ಅಧಿಕಾರ ಅಲ್ಲ, ತುಂಬ ದೊಡ್ಡ ಗೌರವ. ಅದನ್ನು ಉಳಿಸಿಕೊಳ್ಳಬೇಕು ಎಂಬ ಎಚ್ಚರ ನಮಗೂ ಇತ್ತು.



ಮಗಳಾ?' ಅಂತ ಮಾತಾಡಿಸಿಯೇ ಹೋಗಿದ್ದು. ಇಂಥ ಅನುಭವ ಬಹಳ ಜನರಿಗೆ ಆಗಿದೆ.

ನನ್ನ ತಂದೆಗೆ ರಾಜ್‌ಕುಮಾರ್ ಅವರೊಟ್ಟಿಗೆ ಬಾಲ್ಯದ ಸ್ನೇಹ. ಅವರಿಬ್ಬರೂ ಗುಬ್ಬಿ ಥಿಯೇಟರ್‌ನಲ್ಲಿ ಒಟ್ಟಿಗೇ ಬೆಳೆದವರು. ಆನಂತರ ಮದರಾಸಿನಲ್ಲಿ ಕರ್ನಾಟಕ ಕಲಾವಿದರ ಸಂಘದಲ್ಲಿಯೂ ಒಟ್ಟಿಗಿದ್ದವರು. ಅವರು ಯಾವತ್ತೂ ಅಣ್ಣಾವ್ರನ್ನು ಕರೆಯುತ್ತಿದ್ದದ್ದು 'ಮುತ್ತುರಾಜು' ಅಂತಲೇ; ಅಷ್ಟು ಆತ್ಮೀಯರು. ಆದರೂ ನಾನು ಪ್ರಪಂಚ ನೋಡೋ ಹೊತ್ತಿಗೆ ಅವರು ಸಿನಿಮಾ ಒಡನಾಟ ಬಿಟ್ಟು ರಂಗಾಯಣದಲ್ಲಿದ್ದರು.

ಇದನ್ನು ನಾನು ಅಪ್ಪು ಬಳಿ ಹೇಳಿರಲಿಲ್ಲ. ನನ್ನ ತಂದೆ ಅವರ ತಂದೆ ಒಟ್ಟಿಗೇ ಬೆಳೆದವರು ಎಂಬ ಮಾತಿಗೆ ನನ್ನಲ್ಲಿ ಪುರಾವೆಗಳೇ ಇರಲಿಲ್ಲ. ಹಾಗೇ ಹೇಳುತ್ತಿದ್ದ ನನ್ನ ತಂದೆಯೂ ಇರಲಿಲ್ಲ; ಅವರ ತಂದೆಯೂ ಇರಲಿಲ್ಲ. ಆದರೆ ಒಮ್ಮೆ ಅಪ್ಪಾಜಿಯವರ ಪುಸ್ತಕಕ್ಕೆ ಕೆಲವು ಫೋಟೊಗಳು ಬೇಕು ಎಂದು ಸ್ಟುಡಿಯೊಗೆ ಬಂದಿದ್ದರು. ಫೋಟೊ ತೆಗೆಯುವಾಗ, ನನ್ನ ಬಳಿ ಇದ್ದ ಅಪ್ಪಾಜಿಯವರ ರೇಡಿಯೊ ಸಂದರ್ಶನವೊಂದನ್ನು ಅವರಿಗೆ ಕೇಳಿಸಿದ್ದೆ. ಬಹಳ ಸಂತೋಷಪಟ್ಟ ಅವರು ಕಣ್ಣೀರಿಟ್ಟಿದ್ದರು. ಅದಾದ ನಂತರ ಪುಸ್ತಕ ಬಿಡುಗಡೆ ಆಯ್ತು. ನಾನೂ ಪುಸ್ತಕ ಕೊಂಡು ತಂದೆ.

ಪುಸ್ತಕ ತೆಗೆದರೆ... ಮೂರನೇ ಪುಟದಲ್ಲಿ ನಾನು ತೆಗೆದ ಫೋಟೊ ಹಾಗೂ ನಾನು ಹಂಚಿಕೊಂಡ ಆಡಿಯೊ ಕ್ಲಿಪ್‌ಗಾಗಿ ನನಗೆ ಧನ್ಯವಾದ ಅರ್ಪಿಸಿದ್ದರು. ಆ ಪುಸ್ತಕದ ನಡುಮಧ್ಯದಲ್ಲಿ ಒಂದು ವಿಶಾಲವಾದ ಡಬಲ್ ಸ್ಪ್ರೆಡ್ ಹಾಳೆ ಇದೆ. ಅದು ಕರ್ನಾಟಕ ಕಲಾವಿದರ ಸಂಘ ಮದರಾಸಿನಲ್ಲಿ ತೆಗೆಸಿದ್ದ ಚಿತ್ರ. ಅದನ್ನು ನೋಡಿದ ತಕ್ಷಣ ನನಗೆ ನಂಬಲಿಕ್ಕೆ ಸಾಧ್ಯವಾಗಲಿಲ್ಲ. ರಾಜಕುಮಾರ ನನ್ನ ಸ್ನೇಹಿತ ಎಂದು ನನ್ನ ತಂದೆ ಹೇಳುವುದನ್ನು ಕೇಳಿಯೇ ಬೆಳೆದ ನನಗೆ, ಅವರು ಹೇಳಿದ್ದನ್ನು ಕೇಳಷ್ಟೇ ಗೊತ್ತಿತ್ತೇ ಹೊರತು ಒಂದು ಫೋಟೊ ಕೂಡ ನೋಡಿರಲಿಲ್ಲ. ನನ್ನ ತಂದೆ ಬಳಿ ಆ ಫೋಟೊ ಇರಲಿಲ್ಲ. ಆದರೆ ಇಲ್ಲಿ... ಆ ಪೇಜಿನಲ್ಲಿ... ರಾಜಕುಮಾರ್ ಪಕ್ಕದಲ್ಲೇ ನನ್ನ ತಂದೆ ನಿಂತಿದ್ದಾರೆ! ಮೂರನೇ ಸಾಲಿನಲ್ಲಿ ನನ್ನ ತಾಯಿ. ಆವತ್ತಿನ ದಿನದ ನನ್ನ ಖುಷಿಗೆ ಪಾರವೇ ಇಲ್ಲ.

ತಕ್ಷಣ ಮೆಸೇಜ್ ಮಾಡಿದೆ ಪುನೀತ್‌ಗೆ. 'ಸರ್... ನನಗೆ ನೀವು ಧನ್ಯವಾದ ಅರ್ಪಿಸಿದ್ದೀರಿ... ಅದು ಏನೂ ಅಲ್ಲ... ನಿಮಗೆ ನನ್ನ ಕೋಟಿ ಕೋಟಿ ಪ್ರಣಾಮ' ಎಂದೆ. ತಕ್ಷಣ, 'ಪರವಾಗಿಲ್ಲ. ನನ್ನ ತಂದೆಯ ಆಡಿಯೊ ಕ್ಲಿಪ್ ಕೇಳಿ ತುಂಬಾ ಖುಷಿ ಆಯ್ತು. ಹಂಚಿಕೊಂಡಿದ್ದಕ್ಕೆ ಧನ್ಯವಾದ' ಅಂತ ಮೆಸೇಜ್ ಮಾಡಿದರು. 'ಸಾರ್, ಅದಲ್ಲ ವಿಷಯ. ಆ ವಯಸ್ಸಿನಲ್ಲಿ ನನ್ನ ತಂದೆ ಹೇಗಿದ್ದರು, ಮದುವೆಗೂ ಮುನ್ನ ನನ್ನಮ್ಮ ಹೇಗಿದ್ದರು ಎಂಬುದನ್ನು ಇವತ್ತು ನಿಮ್ಮ ಪುಸ್ತಕ ನನಗೆ ತೋರಿಸಿಕೊಟ್ಟಿದೆ. ಅದಕ್ಕೆ ನಾನು ನಿಮಗೆ ಚಿರಋಣಿ' ಅಂದೆ.

ತಕ್ಷಣ ಕರೆ ಮಾಡಿದರು. 'ಯಾರು ನಿಮ್ಮ ತಂದೆ? ಅವರ ಫೋಟೊ ಪುಸ್ತಕದಲ್ಲಿ ಎಲ್ಲಿದೆ?' ಕೇಳಿದರು. ನಿಮ್ಮ ಪುಸ್ತಕದಲ್ಲಿ ಇರುವುದು ಒಂದೇ ಡಬಲ್‌ಸ್ಪ್ರೆಡ್. ಆ ಪೇಜಿನಲ್ಲಿರುವ ಚಿತ್ರದಲ್ಲಿ ನಿಮ್ಮ ತಂದೆಯ ಪಕ್ಕದಲ್ಲೇ ನನ್ನ ತಂದೆ ಇದ್ದಾರೆ ನೋಡಿ' ಅಂದೆ.

'ಓಹ್... ಇಷ್ಟು ದಿನ ನೀವು ಹೇಳಲೇ ಇಲ್ಲವಲ್ಲ' ಅಂತ ಬೇಸರಿಸಿಕೊಂಡರು. ಇನ್ನೊಮ್ಮೆ ಮನೆಗೆ ಹೋದಾಗ, ಪಾರ್ವತಮ್ಮನವರ ಬಳಿ ಕರೆದುಕೊಂಡುಹೋಗಿ ಪರಿಚಯ ಹೇಳಿ ಮಾತಾಡಿಸಿದರು.

ಇವತ್ತು ದಿಢೀರ್ ಅಂತ ಪುನೀತ್ ಇಲ್ಲ.

ನಂಬಲೇ ಆಗುತ್ತಿಲ್ಲ. ಅವರಿಗೆ ಇದ್ದಂಥ ಫಿಟ್‌ನೆಸ್ ನಾನು ನೋಡಿರಲೇ ಇಲ್ಲ. ಅವರ ಕಾಲಿನ ಮೀನಖಂಡ ನೋಡಿದಾಗಲೆಲ್ಲ – 'ಸರ್, ಇದನ್ನ ನೋಡಿದ್ರೆ ನನ್ಗೆ ಕಾಂಪ್ಲೆಕ್ಸ್ ಆಗುತ್ತೆ ಅಂತ ತಮಾಷೆ ಮಾಡುತ್ತಿದ್ದೆ.

ಅಂತಹ ಮನುಷ್ಯ ಇವತ್ತು ಇಲ್ಲ. ಇದು ಹೇಗೆ ಸಾಧ್ಯ? ಯಾವ ನ್ಯಾಯ? ಗೊತ್ತಿಲ್ಲ.

ಚಿತ್ರರಂಗದ ಇತಿಹಾಸದೊಂದಿಗೆ ತಳುಕು ಹಾಕಿಕೊಂಡ ಕುಟುಂಬದ ಕುಡಿಗಳೊಡನೆ ಕೆಲಸ ಮಾಡಿದ, ಅನುಭವ ಹಂಚಿಕೊಂಡ ಪುಣ್ಯ ನನ್ನದು. ಆ ಪುಣ್ಯ, ಸುಖ ಇಷ್ಟು ಬೇಗ ನನ್ನಿಂದ ದೂರ ಆಗಬಾರದಿತ್ತು.

ಪ್ರತಿಕ್ರಿಯಿಸಿ: **feedback@sudha.co.in**

ಚಿತ್ರ: ಮಹೇಂದ್ರ ಸಿಂಹ